## ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹಿರಿಯೂರು

## ಸಿ.ಸಿ ನಂ.382/2025

| | | | |
|---|---|---|---|
| ಸಾಕ್ಷಿದಾರರ ಹೆಸರು | – | ಪುನೀತ್ ಕುಮಾರ್ | ಸಿಡಬ್ಲ್ಯೂ-3 |
| ತಂದೆ ಹೆಸರು | – | ಕರಿಸ್ವಾಮಿ | ಪಿಡಬ್ಲ್ಯೂ-3 |
| ವಯಸ್ಸು | – | 24 ವರ್ಷ | |
| ಉದ್ಯೋಗ | – | ವ್ಯವಸಾಯ | |
| ವಾಸ | – | ಉಪ್ಪಳಗೆರೆ ಗ್ರಾಮ | |

**ದಿನಾಂಕಃ 05.05.2026 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.**

**ಸಾಕ್ಷಿದಾರರ ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ**

ಚಾಸಾ.1 ನನ್ನ ತಾಯಿ . ಚಾಸಾ.2 ನನ್ನ ತಂದೆ . ನನಗೆ ಚಾಸಾ.4 , 5 ರವರು ಗೊತ್ತು. ಆರೋಪಿತರು ನನಗೆ ಗೊತ್ತು. ಆರೋಪಿತರು ನಮಗೆ ಜಗಳ ಮಾಡಿಲ್ಲ, ಹೊಡಿ ಬಡಿ ಮಾಡಿಲ್ಲ, ನನ್ನ ತಾಯಿಯಿ ಬಟ್ಟೆ ಹಿಡಿದು ಎಳೆದಾಡಿಲ್ಲ, ಕೈಕಲುಗಳಿಂದ ಹೊಡೆದಿಲ್ಲ, ಕಲ್ಲುಗಳಿಂದ ಹೊಡೆದಿಲ್ಲ , ಪ್ರಾಣ ಬೆದರಿಕೆ ಹಾಕಿಲ್ಲ, ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮತ್ತು ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಸ ಸ ಅಭಿಯೋಜಕರು ಕೋರಿದ್ದರಿಂದ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದಃ**

ದಿಃ 17.01.2025 ರಂದು ಸುಮಾರು 3.20 ರ ಸಮಯದಲ್ಲಿ ಹಿರಿಯೂರು ತಾ. ಉಪ್ಪಳಗೆರೆ ಗ್ರಾಮದ ಕೃಷ್ಣಪ್ಪನವರ ಮನೆಯ ಮುಂದಿನ ರಸ್ತೆಯಲ್ಲಿ 1 ನೇ ಆರೋಪಿ ನನಗೆ ಗಲಾಟೆ ಮಾಡಿ ಹೊಡೆಯುತ್ತಿದ್ದಾಗ ಚಾಸಾ.1 ಮತ್ತು 2 ರವರು 1 ನೇ ಆರೋಪಿಗೆ ಏಕೆ ಹೊಡೆಯುತ್ತಿಯಾ ಎಂದು ಕೇಳಿದ್ದಕ್ಕೆ 1 ನೇ ಆರೋಪಿ ನನಗೆ ಮತ್ತು ಚಾಸಾ.2, 1 ವರಿಗೆ ಸೂಳೆ ಮಕ್ಕಳಾ ಬೋಳಿ ಮಕ್ಕಳಾ ಎಂದು ಅವಾಚ್ಯ ಶಬ್ದಗಳಿಂದ ಬೈದಾಡಿ , 2 ಮತ್ತು 3 ನೇ

ಆರೋಪಿತರು ಚಾಸಾ.2 ರವರಿಗೆ ಕೈಕಾಲುಗಳಿಂದ ಮೈಕೈಗೆ ಹೊಡೆದು 1, 3, 4 ನೇ ಆರೋಪಿತರು ಚಾಸಾ.1 ರವರು ಹಾಕಿಕೊಂಡ ನೈಟಿ ಹಿಡಿದು ಎಳೆದಾಡಿ ಕೈಕಾಲುಗಳಿಂದ ಮೈಕೈಗೆ ಹೊಡೆದು ಆರೋಪಿ 1, 2, 3 ರವರು ನನಗೆ ಕಲ್ಲಿನಿಂದ ಎದೆಗೆ , ಮೈಗೆ , ಬೆನ್ನಿಗೆ ಹೊಡೆದಿದ್ದು ಸಾಮಾನ್ಯ ಸ್ವರೂಪದ ಗಾಯ ಮಾಡಿದ್ದಲ್ಲದೇ ಈ ಬಾರಿ ಬದುಕಿದ್ದೀರಿ ಇನ್ನೊಮ್ಮೆ ಸಿಕ್ಕರೆ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿದ್ದಾರೆ ಎಂದರೆ ಸರಿಯಲ್ಲ.

ನಾನು ಈ ರೀತಿಯಾಗಿ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಹೇಳಿಕೆ ಭಾಗವನ್ನು ಓದಿ ಹೇಳಲಾಗಿ ಸಾಕ್ಷಿ ನಿರಾಕರಿಸಿದ್ದರಿಂದ ಹೇಳಿಕೆ ಭಾಗವನ್ನು ನಿಪಿ–5 ಎಂದು ಗುರುತಿಸಲಾಯಿತು. ಈಗ ನಾವು ಮತ್ತು ಆರೋಪಿತರು ರಾಜೀ ಮಾಡಿಕೊಂಡಿದ್ದೇವೆ ಎಂದರೆ ಸರಿ ಆ ಕಾರಣದಿಂದ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಆರೋಪಿತರ ಪರ ಶ್ರೀ ಡಿ ಎಲ್ ಎಂ ವಕೀಲರಿಂದ–ಏನೂ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು